ಶಿರಾ - ಮುಳಬಾಗಿಲು ಕೂಡುವ ರಾಷ್ಟ್ರೀಯ ಹೆದ್ದಾರಿ

580 - ಶ್ರೀ ಎನ್.ಹೆಚ್. ಶಿವಶಂಕರ ರೆಡ್ಡಿ (ಗೌರಿಬಿದನೂರು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಹೊಸದಾಗಿ ಮಂಜೂರು ಮಾಡಲಾಗಿರುವ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಶಿರಾದಿಂದ (ರಾ.ಹೆ.4), ಗೌರಿಬಿದನೂರು, ಚಿಕ್ಕಬಳ್ಳಾಪುರ ಮಾರ್ಗವಾಗಿ ಮುಳಬಾಗಿಲು (ರಾ.ಹೆ. 4)ಗೆ ಕೂಡುವ ಪ್ರಸ್ತಾವನೆ ಸೇರಿದೆಯೇ?*

ಆ) *ಹಾಗಿಲ್ಲದಿದ್ದಲ್ಲಿ ಇದಕ್ಕೆ ಪರ್ಯಾಯವಾಗಿ ಬೇರೆ ಯಾವುದಾದರೂ ಪ್ರಸ್ತಾವನೆ ಸರ್ಕಾರದಲ್ಲಿದೆಯೇ?*

ಶ್ರೀ ಧರಮ್ ಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಸೇರಿರುವುದಿಲ್ಲ.

ಆ) ಸಧ್ಯಕ್ಕೆ ಯಾವ ಪರ್ಯಾಯ ಪ್ರಸ್ತಾವನೆ ಇರುವುದಿಲ್ಲ.

ಶ್ರೀ ಎಸ್.ಹೆಚ್. ಶಿವಶಂಕರರೆಡ್ಡಿ : ಮಾನ್ಯ ಅಧ್ಯಕ್ಷರೇ, ಈ ಶಿರಾ - ಚಿತ್ತೂರು ರಸ್ತೆಯನ್ನು ಇಂಟರ್ ಲಿಂಕ್ ಮಾಡತಕ್ಕಂತಹ ಪ್ರಸ್ತಾವನೆ ಹಿಂದೆ ಕೇಂದ್ರ ಸರ್ಕಾರದಲ್ಲಿ ಇದ್ದು ಈ ಹಿಂದೆ ನಮ್ಮ ರಾಜ್ಯದವರೇ ಸರ್ಫೇಸ್ ಮಿನಿಸ್ಟರ್ ಆಗಿದ್ದಾಗ ರಸ್ತೆ ಬಗ್ಗೆ ಪ್ರಸ್ತಾವನೆಯಾಗಿದ್ದು ಅದಕ್ಕೆ ಮಂಜೂರಾತಿ ಕೂಡ ಸಿಕ್ಕಿದೆಯೆಂಬ ವಿಷಯವನ್ನು ನಾವು ಕೇಳಿದ್ದೆವು. ಇದಕ್ಕಾಗಿ ಸ್ವಲ್ಪ ಹಣವೂ ಕೂಡ ಮಂಜೂರಾಗಿದೆಯೆನ್ನುವುದನ್ನು ಕೇಳಿದ್ದೇವೆ. ಇದು ಬಹಳ ಮುಖ್ಯವಾದ ಪ್ರಸ್ತಾವನೆಯಾಗಿದ್ದು ಮಧುಗಿರಿ, ಗೌರಿಬಿದನೂರು, ಚಿಕ್ಕಬಳ್ಳಾಪುರ, ಶಿಡ್ಲಘಟ್ಟ, ಚಿಂತಾಮಣಿ, ಶ್ರೀನಿವಾಸಪುರ ಮತ್ತು ಮುಳಬಾಗಿಲು, ಚಿತ್ತೂರು ಮಾರ್ಗವಾಗಿ ಇಂಟರ್‌ಲಿಂಕ್ ಮಾಡತಕ್ಕಂಥ ರಸ್ತೆಯಾಗಿದೆ. ಇದು ನ್ಯಾಷನಲ್ ಹೈವೇ ನಂಬರ್ 7ಕ್ಕೂ ಇಂಟರ್‌ಲಿಂಕ್ ಮಾಡತಕ್ಕಂಥ ಒಂದು ಪ್ರಸ್ತಾವನೆಯಾಗಿದೆ. ಇದನ್ನು ಮಾಡುವುದರಿಂದ ಸುಮಾರು 50 ರಿಂದ 60 ಕಿ.ಮೀ. ಹತ್ತಿರ ಕೂಡ ಆಗುತ್ತದೆಯೆನ್ನುವ ಅಂಶವನ್ನು ಇಂಜಿನಿಯರ್‌ರವರುಗಳೂ ಕೂಡ ಹೇಳಿದ್ದಾರೆ. ಆದುದರಿಂದ ಒಂದು ವೇಳೆ ಪ್ರಸ್ತಾವನೆಯನ್ನು ಸಲ್ಲಿಸದೇ ಇದ್ದರೆ ಮೊದಲು ಇದಕ್ಕೆ ಆದ್ಯತೆ ಕೊಟ್ಟು ಪ್ರಸ್ತಾವನೆ ಸಲ್ಲಿಸಿ ಅದಷ್ಟು ಜಾಗ್ರತೆ ನ್ಯಾಷನಲ್ ಹೈವೇ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇದು ಮುಳಬಾಗಿಲಿನಿಂದಲೇ ಶಿರಾಗೆ ಹೋಗುತ್ತದೆ. ಹೀಗೆ ಹೋಗುವಾಗ ಮಾರ್ಗ ಮಧ್ಯೆ ಮಧುಗಿರಿ, ಗೌರಿಬಿದನೂರು, ಚಿಂತಾಮಣಿ, ಶ್ರೀನಿವಾಸಪುರ, ಮುಳಬಾಗಿಲಿನ ಮೂಲಕ ಚಿತ್ತೂರಿಗೆ ಹೋಗುತ್ತದೆ. ಈ ದೃಷ್ಟಿಯಿಂದಲೇ ಬಹಳ ಮಹತ್ವದ ರಸ್ತೆಯೆಂದು ತಿಳಿದೇ ಈ ಹಿಂದೆ ಶ್ರೀ ರಾಜಶೇಖರಮೂರ್ತಿಯವರು ಕೇಂದ್ರದಲ್ಲಿ ಸರ್ಫೇಸ್ ಮಿನಿಸ್ಟರ್ ಆಗಿದ್ದಾಗ ಐ.ಎಸ್.ಐ.ನಲ್ಲಿ ಸ್ವಲ್ಪ ಫಂಡ್ ಕೊಟ್ಟು ಕೆಲವು ಪ್ಯಾಚಸ್‌ಗಳನ್ನು ಮಾಡಿ ರಸ್ತೆ ಇಂಪ್ರೂವ್‌ಮೆಂಟ್

ಮಾಡಿದ್ದಾರೆ. ಆದರೆ ಇದು ಸಂಪೂರ್ಣವಾಗಿ ನ್ಯಾಷನಲ್ ಹೈವೇ ಆದರೆ ಅನುಕೂಲವಾಗುತ್ತದೆ ಎನ್ನುವ ಅಭಿಪ್ರಾಯ ಅಧ್ಯಕ್ಷರದ್ದು ಕೂಡ ಆಗಿದೆ. ಅದನ್ನು ಗಮನದಲ್ಲಿಟ್ಟುಕೊಂಡೇ ರಾಜ್ಯ ಸರ್ಕಾರ ಸುಮಾರು ಹತ್ತು-ಹದಿನೈದು ಪ್ರಸ್ತಾವನೆಗಳನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿರುವುದರಲ್ಲಿ ಈ ರಸ್ತೆ 16ನೇ ಸೀರಿಯಲ್ ನಂಬರ್‌ನಲ್ಲಿದೆ. ಇದು ಈಗ ಕೇಂದ್ರ ಸರ್ಕಾರದಲ್ಲಿದೆ, 1999ರವರೆಗೆ ಯಾವ ಯಾವ ಪ್ರಪೋಸಲ್‌ಗಳನ್ನು ಕೇಂದ್ರ ಸರ್ಕಾರ ಅಪ್ರೂವಲ್ ಮಾಡಬೇಕಾಗಿತ್ತೋ ಅದನ್ನು ಮಾಡಿದ್ದಾರೆ. 2000ದಲ್ಲೂ ಕೂಡ ಬಿಜಾಪುರ - ಬೆಳಗಾಂ ರಸ್ತೆ ಬಗ್ಗೆ ಅಪ್ರೂವ್ ಮಾಡಿಕಳುಹಿಸಿದ್ದಾರೆ. ಆದರೆ ದೊಡ್ಡ ರಸ್ತೆಗಳು ಇನ್ನು ಯಾವುದೂ ಅಪ್ರೂವ್ ಆಗಿ ಬಂದಿಲ್ಲ. ಮುಂದಿನ ಪ್ರಸ್ತಾವನೆಯಲ್ಲಿ ಈಗಿನದ್ದನ್ನು ಕೂಡ ಸೇರಿಸಿದ್ದಾರೆ. ಬಹುಶಃ ಮುಂದೆ ಕೇಂದ್ರ ಸರ್ಕಾರ ನಮಗೆ ನ್ಯಾಷನಲ್ ಹೈವೇ ಮಾಡಬೇಕೆಂದು ಕೇಳಿದಾಗ ಪ್ರಯಾರಿಟಿ ಆ ಪಟ್ಟಿಯಲ್ಲಿ ಸದಸ್ಯರು ಹೇಳಿದ್ದನ್ನು ಕೂಡ ಸೇರಿಸಿ ಕಳುಹಿಸೋಣ.

ಅಧ್ಯಕ್ಷರು : ದಯವಿಟ್ಟು ಈ ರಸ್ತೆಯನ್ನು ಸರ್ಕಾರದ ಪ್ರಸ್ತಾವನೆಯಲ್ಲಿ ಸೇರಿಸಿ ಕಳುಹಿಸುವುದಕ್ಕೆ ಏರ್ಪಾಡು ಮಾಡಿ.

ಶ್ರೀ ಡಿ.ವಿ. ಸದಾನಂದಗೌಡ : ರಾಷ್ಟ್ರೀಯ ಹೆದ್ದಾರಿಗಳ ಅವಶ್ಯಕತೆ ಪಟ್ಟಿಯಲ್ಲಿ ಅತ್ಯಂತ ಪ್ರಮುಖವಾಗಿ ಮೈಸೂರು, ಮಡಿಕೇರಿ ಹಾಗೂ ಮಂಗಳೂರು ರಸ್ತೆಗಳು ಇವೆ. ಅದರ ಬಗ್ಗೆ ಸಚಿವರೇನಾದರೂ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿಕಳುಹಿಸಿದ್ದಾರೆಯೇ ಎಂಬ ಬಗ್ಗೆ ತಿಳಿಸಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನ್ಯಾಷನಲ್ ಹೈವೇನಲ್ಲಿ ಹೈಯೆಸ್ಟ್ ಕನೆಕ್ಷನ್ಸ್ ಮಂಗಳೂರಿಗೆ ಇದ್ದಷ್ಟು ಬೇರೆ ಯಾವುದಕ್ಕೂ ಇಲ್ಲ. ಅದು ಕೂಡ ಇದೆ. ಇನ್ನೊಂದು ರಸ್ತೆ ಶಿವಮೊಗ್ಗ, ಚಿನ್ನಗಿರಿಯಿಂದ ಕಾರ್ಕಳದಿಂದ ಮಂಗಳೂರಿಗೆ ಹೋಗತಕ್ಕಂಥದ್ದು, ಕಾರವಾರದಿಂದ ಮಂಗಳೂರಿಗೆ ಹೋಗತಕ್ಕಂಥದ್ದು, ತುಮಕೂರಿನಿಂದ - ಮಂಗಳೂರಿಗೆ ಹೋಗತಕ್ಕಂಥ ರಸ್ತೆಗಳು ನ್ಯಾಷನಲ್ ಹೈವೇಯ ವ್ಯಾಪ್ತಿಯಲ್ಲಿ ಬಂದು ಮಂಗಳೂರಿಗೆ ಸಿಕ್ಕಷ್ಟು ನ್ಯಾಷನಲ್ ಹೈವೆ ಬೆನಿಫಿಟ್ಸ್ ಬೇರೆ ಯಾವ ಜಿಲ್ಲೆಗೂ ಸಿಕ್ಕಿಲ್ಲ.

ಶ್ರೀ ಡಿ.ವಿ. ಸದಾನಂದಗೌಡ : ನಾನು ಹೇಳಿದ್ದು ಮೈಸೂರು, ಮಡಿಕೇರಿ ಮತ್ತು ಭಟ್ಕಳಕ್ಕೆ ಹೋಗುವ ರಸ್ತೆ ಬಗ್ಗೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಆ ರಸ್ತೆ ಬಗ್ಗೆ ಕೂಡ ಪ್ರಸ್ತಾವನೆ ಇದೆ. ಸುಮಾರು 16 ರಸ್ತೆಗಳ ಪ್ರಪೋಸಲ್‌ಗಳನ್ನು ಕಳುಹಿಸುತ್ತಿದ್ದೇವೆ. ತಮಗೆ ಗೊತ್ತಿರುವ ಹಾಗೆ ಅದರಲ್ಲಿ ವರ್ಷಕ್ಕೆ ಎರಡು ರಸ್ತೆಗಳನ್ನು ಕೇಂದ್ರ ಸರ್ಕಾರದವರು ಪಿಕಪ್ ಮಾಡುತ್ತಾರೆ. ತಮಗೆ ಗೊತ್ತಿರುವ ಹಾಗೆ ಎಲ್ಲಾ ಪ್ರಸ್ತಾವನೆಗಳು ಅಲ್ಲಿಗೆ ಹೋದಮೇಲೆ ಸ್ವಲ್ಪ ಎಫೆಕ್ಟೀವ್ ರೀತಿಯ ಲಾಬಿ ಮಾಡಿಯೇ ಮಾಡುತ್ತಾರೆ. ಇದರಿಂದಾಗಿ ಲಾಬಿ ಮಾಡದೆ ಇದ್ದ ಪ್ರಸ್ತಾವನೆಗಳು ಹಿಂದೆ ಉಳಿಯುತ್ತವೆ.

ಶ್ರೀ ಎನ್. ಹೆಚ್. ಶಿವಶಂಕರರೆಡ್ಡಿ : ಮಾನ್ಯ ಅಧ್ಯಕ್ಷರೆ, ಕೆಲವಾರು ಪಟ್ಟಣಗಳಲ್ಲಿ ರಾಜ್ಯ ಹೆದ್ದಾರಿಗಳಿರುವಲ್ಲಿ ರಾಷ್ಟ್ರೀಯ ಹೆದ್ದಾಗಿ ಮಾಡಲು ಆಜುಬಾಜು ರಸ್ತೆ ಅಗಲ ಮಾಡತಕ್ಕಂಥ ಪ್ರಸ್ತಾವನೆ ಸರ್ಕಾರದ ಮುಂದೆ ಇತ್ತು ಎಂದು ಹಿಂದೆ ಕೇಳಿದ್ದೆ. ಅದರಂತೆ ನಮ್ಮ ಪಟ್ಟಣದಲ್ಲೂ ಕೂಡ ಸುಮಾರು

220 ಅಡಿ ರಸ್ತೆ ಮಾಡಲು ಕಟ್ಟಡಗಳನ್ನು ಕೆಡವಲು ನೋಟೀಸನ್ನು ಕೂಡ ಹಿಂದೆ ಕೊಟ್ಟಿದ್ದರು. ಈಗಲೂ ಕೂಡ ಈ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ ಎಂಬ ಬಗ್ಗೆ ಮಾನ್ಯ ಸಚಿವರು ಹೇಳಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ರಾಷ್ಟ್ರೀಯ ಹೆದ್ದಾರಿ ಮಾಡಲು ಪ್ರಸ್ತಾವನೆ ಇದೆಯೆಂದಮೇಲೆ ಸಹಜವಾಗಿ ರಸ್ತೆಯನ್ನು ಅಗಲ ಮಾಡುವ ವಿಷಯ ಇದ್ದೇ ಇರುತ್ತದೆ. ಮೊದಲು ಪ್ರಸ್ತಾವನೆಗೆ ಅಪ್ರೂವ್ ಆದಮೇಲೆ, ಇವೆಲ್ಲಾ ಬಂದೇ ಬರುತ್ತದೆ. ಆಗ ರಸ್ತೆ ಅಗಲ ಮಾಡುವ ಸಲುವಾಗಿ ಮಧ್ಯದಲ್ಲಿ ಬರತಕ್ಕಂಥ ಕಟ್ಟಡಗಳಿಗೆ ನೋಟೀಸ್ ಕೊಟ್ಟು ಪರಿಹಾರ ಕೊಟ್ಟು ಅಕ್ವಿಸಿಶನ್ ಮಾಡಿಯೇ ರಸ್ತೆಯನ್ನು ಮಾಡಲಾಗುತ್ತದೆ.

ಹುಬ್ಬಳ್ಳಿ - ಲಕ್ಷ್ಮೇಶ್ವರ ರಸ್ತೆ ಅಭಿವೃದ್ಧಿ

581 - ಶ್ರೀ ಶಿವಳ್ಳಿ ಚನ್ನಬಸಪ್ಪ ಸತ್ಯಪ್ಪ (ಕುಂದಗೋಳ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕುಂದಗೋಳ ವಿಧಾನಸಭಾ ಕ್ಷೇತ್ರಕ್ಕೆ ಸೇರಿದ ಹುಬ್ಬಳ್ಳಿ-ಲಕ್ಷ್ಮೇಶ್ವರ ರಸ್ತೆ ಹದಗಟ್ಟಿ ಈ ರಸ್ತೆಯಲ್ಲಿ ಬಸ್ಸು, ವಾಹನಗಳು ಓಡಾಡಲು ಅಡಚಣೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಈ ರಸ್ತೆ ದುರಸ್ಥಿಗಾಗಿ ಸಾರ್ವಜನಿಕರಿಂದ ಹಲವಾರು ಭಾರೀ ರಸ್ತೆ ತಡೆ ಚಳುವಳಿ ನಡೆಸಿದರೂ ಸಹ ಸರ್ಕಾರದವರು ಯಾವುದೇ ಕ್ರಮ ಕೈಗೊಳ್ಳದಿರಲು ಕಾರಣವೇನು? ಈ ರಸ್ತೆಯ ದುರಸ್ಥಿ ವೆಚ್ಚವೆಷ್ಟು?*

ಇ) *ಕುಂದಗೋಳ ಕ್ಷೇತ್ರ ಹಾಗೂ 3-4 ಜಿಲ್ಲೆಗಳ ವ್ಯಾಪ್ತಿಗೆ ಬರುವ ಈ ರಸ್ತೆಯನ್ನು ಜಿಲ್ಲಾ ಲೋಕೋಪಯೋಗಿ ರಸ್ತೆಯಿಂದ ರಾಜ್ಯ ರಸ್ತೆಯನ್ನಾಗಿ ಪರಿವರ್ತಿಸಲು ರೂ. 4 ಕೋಟಿ ಅನುದಾನವನ್ನು ಬಿಡುಗಡೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?*

ಶ್ರೀ ಧರಮ್ ಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಹೌದು, ಸರ್ಕಾರದ ಗಮನಕ್ಕೆ ಬಂದಿದೆ.

ಆ) ಈ ರಸ್ತೆಯನ್ನು 14.03 ಲಕ್ಷ ರೂ.ಗಳ ವೆಚ್ಚದಲ್ಲಿ ದುರಸ್ತಿ ಮಾಡಲಾಗುವುದು, ಇದರಲ್ಲಿ 9.22 ಲಕ್ಷ ವಾರ್ಷಿಕ ನಿರ್ವಹಣೆ ಅನುದಾನ ಮತ್ತು 4.81 ಲಕ್ಷ ರೂ. ಮಳೆಹಾನಿಗಾಗಿ ಜಿಲ್ಲಾಧಿಕಾರಿ ಬಿಡುಗಡೆ ಮಾಡಿರುವ ಅನುದಾನ ಸೇರಿದೆ.

ಇ) ಸಧ್ಯಕ್ಕೆ ಈ ಪ್ರಸ್ತಾವನೆ ಇರುವುದಿಲ್ಲ.

ಶ್ರೀ ಶಿವಳ್ಳಿ ಚಿನ್ನಬಸಪ್ಪ ಸತ್ಯಪ್ಪ : ಮಾನ್ಯ ಅಧ್ಯಕ್ಷರೆ, ಸುಮಾರು 42ಕಿ.ಮೀ. ಇರುವ ಮೂರು ಕ್ಷೇತ್ರಗಳಿಗೆ ಸಂಪರ್ಕವಿರುವ ಹುಬ್ಬಳ್ಳಿ-ಲಕ್ಷ್ಮೇಶ್ವರ ರಸ್ತೆ ಸಂಪೂರ್ಣವಾಗಿ ಹದಗೆಟ್ಟು ಹೋಗಿದೆ. ಈ